


‘ಇಲ್ಲಿ ಬೆಸ್ಕಾಂ ಕಚೇರಿ ಎಲ್ಲಿದೆ?’ ಎಂದು ಕೇಳಿದರೆ ಟ್ರಾಫಿಕ್ಕಿನಲ್ಲಿರುವ ಕೆಲವರಿಗೆ ಗೊತ್ತಿಲ್ಲ. ಕೆಲವರ ಕಿವಿಗೆ ಇಯರ್ ಫೋನ್ ಬೆಣೆ. ಇನ್ನು ಕೆಲವರಿಗೆ ಉತ್ತರಿಸಲು ಬಿಡುವಿಲ್ಲ. ಎಲ್ಲರಿಗೂ ಧಾವಂತ. ‘ಇಲ್ಲಿ ಟ್ರಾಫಿಕ್ ಪೊಲೀಸ್ ಕಚೇರಿ ಎಲ್ಲಿದೆ?’ ಮತ್ತೆ ಆ ಪೇದೆಯನ್ನೇ ಕೇಳೋಣವೆಂದರೆ ಆತನಿಗೂ ಬಿಡುವಿಲ್ಲದ ಕೆಲಸ.

‘ಎಲ್ಲಾದ್ರೂ ಹೋಗ್ಲಿ ನಿಮಗ್ಯಾಕೆ ತಲೆಬಿಸಿ? ಬನ್ನಿ ಲೇಟಾಗ್ತಿದೆ’ ಎಂದು ಕೇಳಿದ ಸಂಗಾತಿಯ ಮಾತಿಗೆ ಒಪ್ಪಿ ಮನೆಗೆ ಹೋದೆ. ಅಂದು ಸೆಪ್ಟೆಂಬರ್ 20. ಮನೆಗೆ ಬಂದ ನಂತರವೂ ಬೆಸ್ಕಾಂ, ಬಿಸಿಪಿ (ಟ್ರಾಫಿಕ್), ಬಿಬಿಎಂಪಿ ಎಲ್ಲ ವೆಬ್‌ಸೈಟ್‌ಗಳನ್ನು ಜಾಲಾಡಿದ್ದಾಯಿತು. ಅದರಲ್ಲಿ ದೂರು ದಾಖಲಿಸೋಣ ಎಂದರೆ ಅವರು ಕೊಡುವ ಒಟಿಪಿಗಾಗಿ ಕಾದು ಕಾದು ತಲೆಬಿಸಿ ಹೆಚ್ಚಾಯಿತೇ ವಿನಾ ಆಗಿದ್ದೇನೂ ಇಲ್ಲ.

ವಾರದ ನಂತರ ಮತ್ತೆ ಅದೇ ತಾಣಕ್ಕೆ ಬಂದಾಗ ಆ ಕೊಳವೆ ಹಾಗೇ ಮಲಗಿಯೇ ಇತ್ತು. ಕುಂಭಕರ್ಣನ ಹಾಗೆ. ಟ್ರಾಫಿಕ್ ಧಾವಂತ ಹಾಗೇ ಇತ್ತು. ಮಹಾಪೂರ ಬಂದ ನದಿಯ ಹಾಗೆ. ಜನರು ಹೇಗೋ ಇಕ್ಕಟ್ಟಿನಲ್ಲಿ ಅದರ ಪಕ್ಕದಲ್ಲೇ ಹೊಟ್ಟೆ ಹೊಸೆದುಕೊಂಡು ಹೋಗುತ್ತಿದ್ದರು. ಕೊಳವೆ ಇನ್ನೂ ತುಸು ದೊಡ್ಡ ಗಾತ್ರದ್ದಾಗಿದ್ದರೆ ಅದರೊಳಕ್ಕೇ ತೂರಿಕೊಂಡು ಹೋಗುತ್ತಿದ್ದರೊ ಏನೋ. ಅಷ್ಟು ಅವಸರ ಎಲ್ಲರಿಗೂ.

ಅವನಂತೆ ನಾನೂ ತುಸು ಹೊಟ್ಟೆ ಹೊಸೆಯುತ್ತ ಕಂಬದ ಬಳಿ ಸಾರಿ ಅದರ ಬಾಯೊಳಗೆ, ಪಕ್ಕದ ರಂಧ್ರದೊಳಗೆ ತುಸು ಇಣುಕಿದೆ. ಅದರಲ್ಲಿ ಖಾಲಿ ಶೀಶೆ, ಗುಟ್ಕಾ ಕವರ್ ಮತ್ತಿನ್ನೇನೇನನ್ನೋ ಯಾರೋ ತೂರಿಸಿ ಹೋಗಿದ್ದರು. ತುಂಬ ದಿನಗಳಿಂದ ಕಂಬ ಅಲ್ಲೇ ಇದ್ದಿದ್ದರಿಂದ ಅದು ಕಸದ ಕೊಳವೆಯೂ ಆಗಿತ್ತು.

ಕಂಬದಿಂದ ಹೊರಬಿದ್ದು ಬಂದ ನರಸಿಂಹ ಅವತಾರ ನೆನಪಾಯಿತು. ಭಕ್ತ ಪ್ರಹ್ಲಾದನೋ ಅವನಪ್ಪನೋ ಇಲ್ಲೇನಾದರೂ ಜಿದ್ದಾಜಿದ್ದಿಗೆ ಬಿದ್ದಿದ್ದರೆ ಈ ಕಂಬದಿಂದಲೂ ಮಹಾವಿಷ್ಣು ಹೊರ ಬರಬಹುದಿತ್ತೇನೊ. ಟ್ರಾಫಿಕ್ ಮಧ್ಯೆ ಆತ ಕಂಬವನ್ನು ಪಕ್ಕಕ್ಕೆ ಹೊರಳಿಸಿ ಪುರ್ರೆಂದು ತನ್ನ ಗರುಡನನ್ನೇರಿ ಕಣ್ಮರೆ ಆಗಬಹುದಿತ್ತು. ಆದರೆ ಈಗೀಗ ಟಿ.ವಿಯಲ್ಲೂ ಅಂಥ ಅಸಾಧ್ಯ ಕೆಲಸಗಳನ್ನು ಮಾಡಲೆಂದು ದುಗ್ಗುಬಾಟಿಯೋ, ಪ್ರಭಾಸೋ ಬರುತ್ತಾರೆ ವಿನಾ ವಿಷ್ಣು ಅಪರೂಪ.